**2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**
**ಸಿ.ಸಿ ನಂ. 670/2023**

ಫಿರ್ಯಾದಿದಾರರುಃ ವಿರುದ್ಧ ಆರೋಪಿತರು

ಸರಕಾರದ ಪರವಾಗಿ ಹರಿಹರ
ಗ್ರಾಮಾಂತರ ಪೋಲಿಸ್ ಠಾಣೆ

1) ಗದಿಗೆಯ್ಯ ತಂದೆ ಲೇಟ್ ಉಜಿನಯ್ಯ,
44 ವರ್ಷ, ಕೃಷಿಕರು,
2) ಶ್ರೀಮತಿ ಪುಷ್ಪ ಕೋಂ ಗದಿಗೆಯ್ಯ,
35 ವರ್ಷ, ಮನೆಗೆಲಸ,
ಇಬ್ಬರ ವಾಸಃ ಕೋಮಾರನಹಳ್ಳಿ ಗ್ರಾಮ,
ಹರಿಹರ ತಾಲ್ಲೂಕು, ದಾವಣಗೆರೆ.

ದಂಡ ಪ್ರಕ್ರಿಯಾ ಕಲಂ 313 ರ ಅಡಿ ಆರೋಪಿತನ ಹೇಳಿಕೆ

ಪ್ರಶ್ನೆಃ 1 ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ

ಆ.1 :

ಆ.2 :

ಪ್ರಶ್ನೆಃ 2 ಫ್ರಾಸಾ .1 ಸವಿತಾ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.4 ತನ್ನ ಗಂಡ, ಚಾಸಾ.5 ತನ್ನ ಮಗಳು, ಚಾಸಾ.6 ರವರ ಪರಿಚಯ ಇದೆ ಎಂದು, 1 ನೇ ಆರೋಪಿ ತನ್ನ ಮೈದುನ, 2 ನೇ ಆರೋಪಿ ತನ್ನ ಮೈದುನನ ಹೆಂಡತಿ. 1 ನೇ ಆರೋಪಿ ಮತ್ತು ತನ್ನ ಗಂಡನ ನಡುವೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು. ದಿನಾಂಕ 26.11.2022 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ 1 ನೇ ಆರೋಪಿ ಕೋಮಾರನಹಳ್ಳಿಯಲ್ಲಿರುವ ತಮ್ಮ ಮನೆಯ ಮುಂದೆ ತಾವು ಓಡಾಡುವ ರಸ್ತೆಯಲ್ಲಿ ತನ್ನ ಬೈಕ್ ನ್ನು ಅಡ್ಡ ನಿಲ್ಲಿಸಿ ಹೋಗಿದ್ದರು. ಆಗ ತನ್ನ ಗಂಡ ನಿನ್ನ ಬೈಕ್ ನು ಏಕೆ ನಿಲ್ಲಿಸಿದ್ದೀಯಾ ಎಂದು ಕೇಳಿದಾಗ, 1 ನೇ ಆರೋಪಿಯು ಸೂಳೇ ಮಗನೇ, ಬೋಳಿಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಆಗ ತಾನು ತನ್ನ ಗಂಡನನ್ನು ಕರೆದುಕೊಂಡು ಮನೆಗೆ ಬಂದಿರುವುದಾಗಿ, ನಂತರ 2 ನೇ ಆರೋಪಿತರು ತಮ್ಮ ಮನೆಗೆ ಒಳಗೆ ನುಗ್ಗಿ ತನ್ನ ಗಂಡನನ್ನು ದಬ್ಬಾಡಿ ಕೆಳಗೆ ಬೀಳಿಸಿ, ಅವಾಚ್ಯ ಶಬ್ದಗಳಿಂದ ಬೈದರು, 2 ನೇ ಆರೋಪಿ ತನಗೆ ಮಿಂಡ್ರಿ ಹಾದರಗಿತ್ತಿ ಎಂದು ಅವಾಚ್ಯ ಶಬ್ದಗಳಿಂದ ಬೈದು ತನ್ನ ಮೈ ಕೈ ಗೆ ಹೊಡೆದರು. ನಂತರ ಆರೋಪಿತರು ಹೊಲಕ್ಕೆ ಬಂದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು ಮತ್ತು ತನ್ನ ಗಂಡನಿಗೆ ಕೆಲಸದಿಂದ ತೆಗೆಸುತ್ತೇನೆ ಎಂದು ಬೆದರಿಸಿದರು. ನಂತರ ದಿನಾಂಕ 29.11.2022 ರಂದು ತಾನು ಮಲೆಬೆನ್ನೂರು ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರು ಸಲ್ಲಿಸಿರುವುದಾಗಿ, ಸಾಕ್ಷಿಯ ಸದರಿ ದೂರು ಮತ್ತು ಅದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು. ನಿಪಿ.1

ದೂರಿಗೆ ತಾನೇ ಮಾಹಿತಿ ನೀಡಿದ್ದು, ನಂತರ ದೂರಿಗೆ ಅನುಗುಣವಾಗಿ ದಿನಾಂಕಃ 30.11.2022 ರಂದು ಪೋಲೀಸರು ತಮ್ಮ ಮನೆಗೆ ಬಂದು ಪಂಚನಾಮೆ ಮಾಡಿ, ಆ ಕಾಲಕ್ಕೆ ಕಚ್ಚಾ ನಕಾಶೆ ತಯಾರಿಸಿ, ಛಾಯಾಚಿತ್ರವನ್ನು ತೆಗದಿರುವುದಾಗಿ, ಸದರಿ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ಸಾಕ್ಷಿಯು ನೋಡಿ, ಅದರಲ್ಲಿರುವ ತನ್ನ ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ನಿಪಿ.2 ಮತ್ತು ನಿಪಿ.3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 2(ಎ) ಮತ್ತು ನಿಪಿ 3(ಎ) ಎಂದು, ಛಾಯಾಚಿತ್ರವನ್ನು ನಿಪಿ.4 ಗುರುತಿಸುವುದಾಗಿ ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಪ್ರಶ್ನೆಃ 3 ಪ್ರಾಸಾ .2 ಸುವರ್ಣ ಎಂ.ಕೆ. ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ 1 ತನ್ನ ತಾಯಿ, ಚಾಸಾ 4 ತನ್ನ ತಂದೆ, ಚಾಸಾ 6 ರವರ ಪರಿಚಯ ಇದೆ ಎಂದು, 1 ಮತ್ತು 2 ನೇ ಆರೋಪಿತರು ತನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮ ಎಂದು, ದಿನಾಂಕ 26.11.2022 ರಂದು ತನ್ನ ತಂದೆ ಶಾಲೆಗೆ ಹೋಗಲು ತಯಾರಾಗಿ ಮನೆಯ ಹೊರಗೆ ಬಂದಾಗ 1 ನೇ ಆರೋಪಿ ತಮ್ಮ ಮನೆಯು ಮುಂದಿನ ದಾರಿಯಲ್ಲಿ ತನ್ನ ತಂದೆಯ ಬೈಕಿನ ಮುಂದೆ ತನ್ನ ಸೈಕಲ ನ್ನು ಅಡ್ಡಲಾಗಿ ನಿಲ್ಲಿಸಿದ್ದರು. ಆಗ ತನ್ನ ತಂದೆ 1 ನೇ ಆರೋಪಿಗೆ ನೀನು ಸೈಕಲನ್ನು ಏಕೆ ನಿಲ್ಲಿಸಿದ್ದೀಯಾ ಎಂದು ಕೇಳಿದಾಗ 1 ನೇ ಆರೋಪಿಯು ಏಕಾಏಕಿ ಸೂಳೆಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಆಗ ತನ್ನ ತಾಯಿ ಹೊರಗಡೆ ಬಂದಾಗ 2 ನೇ ಆರೋಪಿಯು ತನ್ನ ತಾಯಿಗೆ ಸೂಳೇ ಮಗಳೇ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಆ ಸಮಯದಲ್ಲಿ 1 ನೇ ಆರೋಪಿಯು ತನ್ನ ತಂದೆಯು ಹಿಡಿದುಕೊಂಡಿದ್ದ ಎರಡೂ ಊರುಗೋಲುಗಳನ್ನು ಕಸೆದಕೊಂಡು ತನ್ನ ತಂದೆಯನ್ನು ತಳ್ಳಿದರು. ಆಗ ತನ್ನ ತಂದೆ ಕೆಳಗೆ ಬಿದ್ದಿರುವುದಾಗಿ, ಆಗ 1 ನೇ ಆರೋಪಿ ತನ್ನ ತಂದೆ ಕೆನ್ನೆಗೆ ಹೊಡೆಯುತ್ತಿದ್ದಾಗ ತಾನು ಮತ್ತು ತನ್ನ ತಂಗಿ ಬಂದು ತನ್ನ ತಂದೆಗೆ ಆ ಸಮಯದಲ್ಲಿ ಚಾಸಾ 6 ರವರು ಬಂದು ಊರುಗೋಲುಗಳನ್ನು ಕೊಟ್ಟು ಎಬ್ಬಿಸಿರುವುದಾಗಿ, ಜಗಳವನ್ನು ಬಿಡಿಸಿದ್ದು, ನಂತರ ತನ್ನ ತಂದೆಯನ್ನು ಮನೆಯ ಒಳಗೆ ಕರೆದುಕೊಂಡು ಬರುತ್ತಿದ್ದಾಗ ಆರೋಪಿತರು ಮನೆಯ ಒಳಗೆ ಬಂದು 2 ನೇ ಆರೋಪಿಯು ತನ್ನ ತಾಯಿ ಕೆನ್ನೆಗೆ ಮತ್ತು ಮೈಕೈಗೆ ಹೊಡೆದಿರುವುದಾಗಿ, ಆಗ 1 ನೇ ಆರೋಪಿಯು 2 ನೇ ಆರೋಪಿಗೆ ತನ್ನ ತಾಯಿಗೆ ಹೊಡೆಯುವಂತೆ ಕುಮ್ಮಕ್ಕು ನೀಡಿರುತ್ತಾರೆ. ನಂತರ 1 ನೇ ಆರೋಪಿಯು ತನ್ನ ತಂದೆಯ ಕೊರಳಪಟ್ಟಿಯನ್ನು ಹಿಡಿದು ಎಳೆದಾಡಿದ್ದರಿಂದ ತನ್ನ ತಂದೆ ಕೆಳಗೆ ಬಿದ್ದುರುತ್ತಾರೆ. ಆಗ ತಾನು ಮತ್ತು ತನ್ನ ತಂಗಿ ಕಿರುಚಿ ಅಳುತ್ತಾ ಇದ್ದೆವು. ಆಗ ಆರೋಪಿತರು ತನ್ನ ತಂದೆ ತಾಯಿಗೆ ಜೀವ ಬೆದರಿಕೆ ಹಾಕಿ ನೀವು ಹೊಲಕ್ಕೆ ಕಾಲಿಟ್ಟರೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ ಮತ್ತು ನಿನ್ನನ್ನು ಕೆಲಸದಿಂದ ತೆಗೆಸಿಹಾಕುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ನಂತರ ಚಾಸಾ.6 ರವರು ತಾನು ಸಮಾಧಾನ ಮಾಡಿರುವುದಾಗಿ, ಎರಡು ದಿನಗ ಕಾಲ ತಡೆದು ನಂತರ ತನ್ನ ತಾಯಿ ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಪ್ರಶ್ನೆಃ 4 ಪ್ರಾಸಾ .3 ಎಂ.ಕರಿಬಸಯ್ಯ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ 1 ತನ್ನ ಹೆಂಡತಿ, ಚಾಸಾ 5 ತನ್ನ ಮಗಳು, ಚಾಸಾ 6 ತನ್ನ ಸಂಬಂಧಿಕರು, 1 ನೇ ಆರೋಪಿ ತನ್ನ ತಮ್ಮ, 2 ನೇ ಆರೋಪಿ ತನ್ನ ತಮ್ಮನ ಹೆಂಡತಿ ಎಂದು, ದಿನಾಂಕ 26.11.2022 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ತನ್ನ ಮನೆಯ ಮುಂದೆ ನಿಂತಿರುವ ತನ್ನ ಬೈಕಿಗೆ 1 ನೇ ಆರೋಪಿಯು ಅಡ್ಡಲಾಗಿ ತನ್ನ ಸೈಕಲ್ ಅನ್ನು ನಿಲ್ಲಿಸಿದ್ದರು. ಅದನ್ನು ನೋಡಿ ತಾನು 1 ನೇ ಆರೋಪಿಗೆ ನಿನ್ನ ಸೈಕಲ್ ನ್ನು ಏಕೆ ಅಡ್ಡಲಾಗಿ ನಿಲ್ಲಿಸಿದ್ದೀಯಾ ಎಂದು ಕೇಳಿದ್ದಕ್ಕೆ 1 ನೇ ಆರೋಪಿಯು ನನಗೆ ಸೂಳೆ ಮಗನೆ, ಕುಂಟನನ್ನ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುವುದಾಗಿ, ನಂತರ ತಾನು ತನ್ನ ಹೆಂಡತಿಯನ್ನು ಕರೆದು ಸೈಕಲ್ ನ್ನು ತೆಗೆಯಲು ಹೇಳಿದೆನು. ಆಗ ತನ್ನ ಹೆಂಡತಿ ಸೈಕಲ್ ನ್ನು ತೆಗೆಯುತ್ತಿರುವಾಗ 1 ನೇ ಆರೋಪಿಯು ತನ್ನ ಹೆಂಡತಿಗೆ ಮಿಂಡ್ರಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುವುದಾಗಿ, ಆಗ ತನ್ನ ಹೆಂಡತಿಗೆ ಏಕೆ ಬೈಯುತ್ತೀಯಾ ಎಂದು ಕೇಳಿದ್ದಕ್ಕೆ ಆಗ 1 ನೇ ಆರೋಪಿಯು ಏಕಾಏಕಿ ತನ್ನ ಕೈಯಲ್ಲಿದ್ದ ಊರುಗೋಲನ್ನು ಕಸೆದು ಬಿಸಾಕಿ, ತನ್ನನ್ನು ಕೆಳಕ್ಕೆ ನೂಕಿರುವುದಾಗಿ, ಆಗ ತನ್ನ ಮಕ್ಕಳು ಬಂದು ತನ್ನ ಊರುಗೋಲನ್ನು ತಂದು ಕೊಟ್ಟಿರುವುದಾಗಿ, ನಂತರ 2 ನೇ ಆರೋಪಿಯು ತನ್ನ ಹೆಂಡತಿಯ ತಲೆಕೂದಲನ್ನು ಜಗ್ಗಿ ಅವಾಚ್ಯ ಶಬ್ದಗಳಿಂದ ಬೈದು, ಬಟ್ಟೆಯನ್ನು ಹಿಡಿದು ಎಳೆದಾಡಿ, ಕೈ ಕಾಲುಗಳಿಂದ ಹೊಡೆದಿರುತ್ತಾರೆ. ನಂತರ ಆರೋಪಿತರು ತಮಗೆ ಜೀವ ಬೆದರಿಕೆ ಹಾಕಿರುವುದಾಗಿ, ನಂತರ ಚಾಸಾ 6 ರವರು ಗಲಾಟೆ ಶಬ್ದ ಕೇಳಿ ಜಗಳ ಬಿಡಿಸಲು ಬಂದಿದ್ದು, ತನ್ನನ್ನು ಮತ್ತು ತನ್ನ ಹೆಂಡತಿ ಮಕ್ಕಳನ್ನು ತನ್ನ ಮನೆಯ ಒಳಗೆ ಕಳುಹಿಸಿದರು. ನಂತರ ಆರೋಪಿತರು ತಮ್ಮ ಮನೆಯ ಒಳಗೆ ನುಗ್ಗಿ ತನ್ನ ಕೊರಳ ಪಟ್ಟಿಯನ್ನು ಹಿಡಿದು ಎಳೆದಾಡಿ, 1 ನೇ ಆರೋಪಿ 2 ನೇ ಆರೋಪಿಗೆ ತನಗೆ ಹೊಡೆಯಲು ಕುಮ್ಮಕ್ಕು ನೀಡಿರುವುದಾಗಿ, ನಂತರ ಚಾಸಾ 6 ರವರು ತಮ್ಮ ಮನೆಯ ಒಳಗೆ ಬಂದು ಜಗಳ ಬಿಡಿಸಿ, ಆರೋಪಿತರನ್ನು ತಮ್ಮ ಮನೆಯಿಂದ ಹೊರಗೆ ಹಾಕಿರುವುದಾಗಿ, ಆ ಕಾಲಕ್ಕೆ ಆರೋಪಿತರು ನಿನ್ನ ಕೆಲಸವನ್ನು ಬಿಡಿಸುತ್ತೇನೆ ಎಂದು ಹೇಳಿದ್ದು, ನಂತರ ದಿನಾಂಕಃ 26.11.2022 ಸದರಿ ಗಲಾಟೆ ವಿಚಾರವಾಗಿ ಚಾಸಾ.1 ರವರು ದೂರನ್ನು ಸಲ್ಲಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಪ್ರಶ್ನೆಃ 5 ಪ್ರಾಸಾ .4 ಸಚಿನ್ ಇವರು ತಮ್ಮ ಸಾಕ್ಷ್ಯದಲ್ಲಿ ತನಗೆ ಚಾಸಾ.2 ರವರ ಪರಿಚಯವಿದೆ. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ, ಅವು ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆ ಆಗಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 2 ಮತ್ತು ನಿಪಿ 3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ 2(ಬಿ) ಮತ್ತು ನಿಪಿ 3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ದಿನಾಂಕಃ26.11.2022 ರಂದು ಚಾಸಾ.1 ರವರ ಮನೆಯ ಮುಂದೆ ಚಾಸಾ 1 ರವರ ಮತ್ತು 1 ಮತ್ತು

4 ನೇ ಆರೋಪಿತರ ಮಧ್ಯ ಗಲಾಟೆಯ ವಿಚಾರವಾಗಿ ಪೊಲೀಸರು ಪಂಚನಾಮೆ ಜರುಗಿಸಲು ಬಂದಾಗ ಮಾಡಿರುವುದಾಗಿ, ಸಾಕ್ಷಿಯು ನಿಪಿ.4 ರಲ್ಲಿ ತಾನು ಇರುವುದನ್ನು ನೋಡಿ ಗುರುತಿಸುತ್ತಾರೆ. ನಿಪಿ.4 ನ್ನು ಪಂಚನಾಮೆ ಜರುಗಿಸುವ ಕಾಲಕ್ಕೆ ತೆಗೆಯಲಾಯಿತು. ಸದರಿ ನಿಪಿ 2 ನ್ನು ಮಧ್ಯಾಹ್ನ 3.00 ರಿಂದ 04.00 ಗಂಟೆ ವರೆಗೆ ಜರುಗಿಸಲಾಯಿತು. ಆ ಕಾಲಕ್ಕೆ ತಾನು, ಚಾಸಾ 1 ಮತ್ತು 2 ರವರು ಹಾಜರಿದ್ದೆವು ಎಂದು ನಿಮ್ಮ ವಿರುದ್ಧ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಪ್ರಶ್ನೆಃ 6 ಫ್ರಾಸಾ .5 ಜಗದೀಶಯ್ಯ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ 1, 4 ಮತ್ತು 5 ರವರ ಪರಿಚಯ ಇದೆ. ಆರೋಪಿತರು ತನ್ನ ಸಂಬಂಧಿಕರು ಎಂದು, ಕಳೆದ ಎರಡು ವರ್ಷಗಳ ಹಿಂದೆ ಕೋಮಾರನಹಳ್ಳಿಯ ಚಾಸಾ 4 ರವರ ಮನೆಯ ಮುಂದೆ ಚಾಸಾ 4 ಮತ್ತು 1 ನೇ ಆರೋಪಿಯ ನಡುವೆ ಗಲಾಟೆ ನಡೆಯುತ್ತಿತ್ತು. ಸದರಿ ಗಲಾಟೆಯಲ್ಲಿ 1 ನೇ ಆರೋಪಿಯು ಚಾಸಾ 4 ರವರ ಮನೆಯ ಮುಂದೆ ಸೈಕಲ್ ನು ಅಡ್ಡಲಾಗಿ ನಿಲ್ಲಿಸಿದ್ದರು. ಚಾಸಾ 4 ರವರು ಸೈಕಲ್ ನ್ನು ತೆಗೆಯುವಂತೆ ಹೇಳಿದಾಗ ಗಲಾಟೆ ನಡೆದಿರುತ್ತದೆ. ನಂತರ ತಾನು ಮತ್ತು ತನ್ನ ತಂದೆ ಗಲಾಟೆಯನ್ನು ಬಿಡಿಸಿರುತ್ತೇವೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಪ್ರಶ್ನೆಃ 7 ಫ್ರಾಸಾ .6 ಫೈರೋಜ್ ಖಾನ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 29.11.2022 ರಂದು ಸಂಜೆ 7.30 ಗಂಟೆಗೆ ಚಾಸಾ.1ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ನಂ.222/2022 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ, ಸಾಕ್ಷಿ ಗುರುತಿಸಿದ ದೂರನ್ನು ನಿಪಿ.1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಪ್ರ.ವ.ವರದಿಯನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ದಿನಾಂಕಃ 30.11.2022 ರಂದು ಚಾಸಾ.1 ರವರ ಮನೆಯ ಮುಂದೆ ಗಲಾಟೆ ಆದ ಸ್ಥಳಕ್ಕೆ ಭೇಟಿ ನೀಡಿ ಪಿಸಿ-421 ರವರಿಂದ ಚಾಸಾ.2, 3ರವರಿಗೆ ನೋಟೀಸ್ ಜಾರಿ ಮಾಡಿಸಿ ಅವರನ್ನು ಬರಮಾಡಿಕೊಂಡು, ಸದರಿಯವರ ಸಮಕ್ಷಮ ಮಧ್ಯಾಹ್ನ 3 ರಿಂದ ಸಂಜೆ 4 ಗಂಟೆವರೆಗೆ ಪಂಚನಾಮೆ ಜರುಗಿಸಿರುವುದಾಗಿ, ಠಾಣಾ ಪಿಸಿ-397 ರವರಿಂದ ಸ್ಥಳದಲ್ಲಿ ಛಾಯಾಚಿತ್ರ ಮತ್ತು ಕಚ್ಚಾನಕಾಶೆ ತೆಗೆಸಿದ್ದು, ಸಾಕ್ಷಿ ಗುರುತಿಸಿದ ಪಂಚನಾಮೆಯನ್ನು ನಿಪಿ.1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಕಚ್ಚಾನಕಾಶೆಯನ್ನು ನಿಪಿ.3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಛಾಯಾಚಿತ್ರವನ್ನು ನಿಪಿ.4 ಎಂದು ಗುರುತಿಸಿದ್ದು, ಸಾಕ್ಷಿ ಗುರುತಿಸಿದ ಪಂಚರಿಗೆ ನೀಡಿದ ನೋಟೀಸನ್ನು ನಿಪಿ.6

ಎಂದು ಗುರುತಿಸಿದ್ದು, ಅದೇ ದಿನ ಚಾಸಾ.2,3 ರವರ ಹೇಳಿಕೆ ಪಡೆದಿರುವುದಾಗಿ, ನಂತರ ಚಾಸಾ.4 ರಿಂದ 6 ರವರ ಹೇಳಿಕೆ ಪಡೆದಿರುವುದಾಗಿ , ನಂತರ ಆರೋಪಿತರ ವಿಚಾರಣೆಗೆ ಹಾಜರಾಗುವಂತೆ ಕಲಂ.41(ಎ) ರೀತಿ ನೋಟೀಸ್ ಜಾರಿ ಮಾಡಿರುವುದಾಗಿ, ನಂತರ ಚಾಸಾ.8 ರವರಿಂದ 65(ಬಿ) ಪ್ರಮಾಣ ಪತ್ರ ಪಡೆದು ಅವರ ಹೇಳಿಕೆ ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ 65(ಬಿ) ಪ್ರಮಾಣ ಪತ್ರವನ್ನು ನಿಪಿ. 7 ಎಂದು ಗುರುತಿಸಲಾಯಿತು. ದಿನಾಂಕಃ 01.01.2023 ರಂದು ಚಾಸಾ.6 ರವರ ಹೇಳಿಕೆ ಪಡೆದಿರುವುದಾಗಿ, ದಿನಾಂಕಃ 25.05.2023 ರಂದು ಕೃತ್ಯ ನಡೆದ ಸ್ಥಳದ ಮನೆಯ ದಾಖಲೆಯನ್ನು ಪಿಡಿಒ, ಹಾಲಿವಾಣ ಗ್ರಾ.ಪಂ.ರವರಿಂದ ಪಡೆದಿರುವುದಾಗಿ, ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿಪಿ.8(ಎ) ಗುರುತಿಸಲಾಯಿತು. ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಆ.1 :

ಆ.2 :

ಪ್ರಶ್ನೆಃ 8 ನೀವು ಏನನ್ನಾದರೂ ಹೇಳಬಯಸುವಿರಾ?

ಉತ್ತರಃ

ಆ.1 :

ಆ.2 :

ಪ್ರಶ್ನೆಃ 9 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ

ಆ.1 :

ಆ.2 :

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ಸಹಿ/-

ದಿನಾಂಕಃ 21.11.2025 C/c 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಸ್ಥಳಃ ಹರಿಹರ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ.